**<u>ದಿನಾಂಕಃ 16.02.2026 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟಿ ಸವಾಲುಃ ವಾದಿ ಪರ ಶ್ರೀ ವಿ ಎಸ್ ಪಿ ವಕೀಲರಿಂದ</u>**.

1 ನೇ ಪ್ರತಿವಾದಿ ಮತ್ತು ಆತನ ಅಕ್ಕ–ತಂಗಿಯರ ಪರಿಚಯ ನನಗೆ ಇರುತ್ತದೆ ಅಂದರೆ ಸರಿ. ನಾನು ಇಂಡೀಹಳ್ಳಿ ಗ್ರಾಮದ ವಾಸಿ ಅಂದರೆ ಸರಿ. ಪತ್ರ ಬರಹಗಾರನಾದ ಕೆ ಬಿ ಗುಡ್ಡಪ್ಪರವರು 1 ನೇ ಪ್ರತಿವಾದಿಯ ಸಂಬಂಧಿಕರು ಅಂದರೆ ಸರಿಯಲ್ಲ. ಕೆ ಬಿ ಗುಡ್ಡಪ್ಪರವರು 1 ನೇ ಪ್ರತಿವಾದಿಯ ಸಂಬಧಿಕರು ಇದ್ದರು ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನೀವು ಜಮೀನು ಖರೀದಿ ಮಾಡುವ ಕಾಲಕ್ಕೆ ಸರ್ವೇ ನಂ.179 ರ ಪಹಣಿ ಯಾರ್–ಯಾರ ಹೆಸರಲ್ಲಿ ಇತ್ತು ಅಂದರೆ ಸಾಕ್ಷಿ 1 ನೇ ಪ್ರತಿವಾದಿಯ ಹೆಸರಲ್ಲಿ ಇತ್ತು ಎನ್ನುತ್ತಾರೆ. ನೀವು ಖರೀದಿ ಮಾಡಿರುವ ಜಮೀನಿನಲ್ಲಿ ವಾದಿ, ಈರಮ್ಮ, 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳಿಗೆ ಹಿಸ್ಸೆ ಹಕ್ಕು ಇರುತ್ತದೆಂದು ನಿಮಗೆ ಹೇಗೆ ಗೊತ್ತಾಗಿರುತ್ತದೆ ಅಂದರೆ ಸಾಕ್ಷಿ ಊರ ಜನರು ಬಂದು ಗಂಗಾಧರಪ್ಪ, ಆತನ ಮಕ್ಕಳು ಮತ್ತು ಸಹೋದರಿಯರು ಜಮೀನು ಕೊಡುತ್ತಾರೆಂದು ಹೇಳಿರುತ್ತಾರೆ ಹಾಗಾಗಿ ಗೊತ್ತು ಎನ್ನುತ್ತಾರೆ. ಜಮೀನು ಮಾರಾಟ ಮಾಡುತ್ತೇವೆಂದು 1 ನೇ ಪ್ರತಿವಾದಿ ಮಾತ್ರ ಹೇಳಿರುತ್ತಾನೆ ಅಂದರೆ ಸರಿಯಲ್ಲ. ಜಮೀನು ಖರೀದಿಯ ಬಾಬ್ತು ಕೊಡಬೇಕಾದ ರೂ.5,80,000/– ವನ್ನು ಯಾರ ಖಾತೆಗೆ ಜಮಾ ಮಾಡಿರುತ್ತೀರಿ ಅಂದರೆ ಸಾಕ್ಷಿ ವಾದಿ, 1 ನೇ ಪ್ರತಿವಾದಿ ಮತ್ತು ಈರಮ್ಮರವರಿಗೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ಹಣವನ್ನು ನೀವೇ ವಿಭಾಗ ಮಾಡಿ ಕೊಟ್ಟಿರುತ್ತೀರೋ ಅಥವಾ ಹಂಚಿ ಕೊಳ್ಳಿ ಎಂದು ಹೇಳಿ ಕೊಟ್ಟಿರುತ್ತೀರೋ ಅಂದರೆ ಸಾಕ್ಷಿ

ನೀವೇ ಹಂಚಿಕೊಳ್ಳಿ ಎಂದು ಹಣ ಕೊಟ್ಟಿರುತ್ತೇನೆ ಎನ್ನುತ್ತಾರೆ. ಹಣವನ್ನು ಎಲ್ಲಿ ಕೊಟ್ಟಿರುತ್ತೀರಿ ಅಂದರೆ ಸಾಕ್ಷಿ 1 ನೇ ಪ್ರತಿವಾದಿಯ ಮನೆಯಲ್ಲಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ಹಣವನ್ನು ಕ್ರಯಪತ್ರ ನೋಂದಣಿ ಆಗುವ ಕಾಲಕ್ಕೆ ಕೊಟ್ಟಿರುತ್ತೀರೋ ಅಥವಾ ಅದಕ್ಕೂ ಪೂರ್ವದಲ್ಲಿ ಕೊಟ್ಟಿರುತ್ತೀರೋ ಅಂದರೆ ಸಾಕ್ಷಿ ಕ್ರಯಪತ್ರ ನೋಂದಣಿ ಆಗುವ ಪೂರ್ವದಲ್ಲಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ಹಣವನ್ನು ಎಷ್ಟು ದಿನಗಳ ಮುಂಚಿತವಾಗಿ ಕೊಟ್ಟಿರುತ್ತೀರಿ ಅಂದರೆ ಸಾಕ್ಷಿ 2 ದಿನಗಳ ಮುಂಚಿತವಾಗಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ಹಣವನ್ನು ಯಾವ ದಿನಾಂಕದಂದು ಕೊಟ್ಟಿರುತ್ತೀರಿ ಅಂದರೆ ಸಾಕ್ಷಿ ದಿನಾಂಕಃ 19.10.2015 ರಂದು ಕೊಟ್ಟಿರುತ್ತೇನೆ ಎನ್ನುತ್ತಾರೆ. ಹಣ ಕೊಡುವ ಕಾಲಕ್ಕೆ ಯಾರ್-ಯಾರು ಇದ್ದರು ಅಂದರೆ ಸಾಕ್ಷಿ ರಾಮಪ್ಪ, ಮಹೇಶಪ್ಪ ಮತ್ತು ಊರ 4 ಜನ ಹಿರಿಯರು ಇದ್ದರು ಎನ್ನುತ್ತಾರೆ. ನಿಡಿ-21 ರಲ್ಲಿ ಹಣ ಪಾವತಿಯಾದ ದಿನಾಂಕ ಬರೆಸಿರುತ್ತೀರಾ ಅಂದರೆ ಸಾಕ್ಷಿ ಬರೆಸಿಲ್ಲ ಎನ್ನುತ್ತಾರೆ. ರೂ.5,80,000/- ಹಣವನ್ನು ನಗದು ರೂಪದಲ್ಲಿ ಕೊಡುವುದು ಕಾನೂನಿಗೆ ವಿರುದ್ಧವಾಗಿರುತ್ತದೆ ಅಂದರೆ ಸಾಕ್ಷಿ ಪ್ರತಿವಾದಿ ಗಂಗಾಧರಪ್ಪ ಮತ್ತು ಆತನ ಕುಟುಂಬದವರು ಜಮೀನಿನ ಮೇಲೆ ಸಾಲ ಇರುತ್ತದೆ ಅದನ್ನು ಕಟ್ಟಲು ನಮಗೆ ಹಣ ನಗದು ರೂಪದಲ್ಲಿ ಬೇಕು ಎಂದು ಕೇಳಿರುತ್ತಾರೆ ನಾನು ಕೊಟ್ಟಿರುತ್ತೇನೆ ಎನ್ನುತ್ತಾರೆ. ದಿನಾಂಕಃ 19.10.2015 ರಂದು ಹಣ ಕೊಟ್ಟಿರುತ್ತೇನೆಂದು ತೋರಿಸಲು ಬೇರೆ ದಾಖಲೆ ಇರುತ್ತದೆಯಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿನಾಂಕಃ 19.10.2015 ರಂದು 1 ನೇ ಪ್ರತಿವಾದಿ, ವಾದಿ ಮತ್ತು ಈರಮ್ಮರವರಿಗೆ ಹಣ ಕೊಟ್ಟಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿ

ಜೊತೆ ಮಾಡಿಕೊಂಡ ಹಣಕಾಸಿನ ವ್ಯವಹಾರ ಮತ್ತು ಕ್ರಯದ ವ್ಯವಹಾರದ ಬಗ್ಗೆ ವಾದಿಗೆ ಗೊತ್ತಿರುವುದಿಲ್ಲ ಅಂದರೆ ಸರಿಯಲ್ಲ. ಬ್ಯಾಂಕ್ ಸಾಲ ಪಡೆಯಲು ಸಹಿ ಬೇಕೆಂದು ನಿಡಿ-21 ಕ್ಕೆ ನಾನು, 1 ನೇ ಪ್ರತಿವಾದಿ, ಆತನ ಮಕ್ಕಳು ಮತ್ತು ಪತ್ರ ಬರಹಗಾರರು ಸೇರಿ ವಾದಿಯ ಸಹಿ ಪಡೆದಿರುತ್ತೇವೆ ಅಂದರೆ ಸರಿಯಲ್ಲ. ನಮಗೆ ಅನುಕೂಲ ಆಗುವ ವ್ಯಕ್ತಿಗಳಾದ ರಾಮಪ್ಪ ಮತ್ತು ಮಹೇಶರವರ ಸಹಿಗಳನ್ನು ನಿಡಿ-21 ಕ್ಕೆ ಪಡೆದಿರುತ್ತೇನೆ ಅಂದರೆ ಸರಿಯಲ್ಲ. ನಾನು ಮೋಸದಿಂದ ಪಡೆದುಕೊಂಡು ಕ್ರಯಪತ್ರ ವಾದಿಗೆ ಸರ್ವೇ ನಂ.179 ರಲ್ಲಿರುವ ಹಕ್ಕನ್ನು ಮಟುಕುಗೊಳಿಸುವುದಿಲ್ಲ ಸರಿಯಲ್ಲ. ನಾನು ಖರೀದಿ ಮಾಡಿರುವ ಜಮೀನಿನಲ್ಲಿ ವಾದಿಗೆ ಹಿಸ್ಸೆ ಹಕ್ಕು ಇರುತ್ತದೆ ಅಂದರೆ ಸರಿಯಲ್ಲ. ನಾನು ಮೋಸದಿಂದ ಕ್ರಯಪತ್ರ ಬರೆಸಿಕೊಂಡಿರುವುದು ಗೊತ್ತಿದ್ದರು ಸಹ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟಿ ಸವಾಲುಃ** ಪ್ರತಿವಾದಿ ನಂ.1, 24 ರಿಂದ 26 ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರು ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.